ಗುಬ್ಬಿಯವರ ಪ್ರಶ್ನೆ.

ಈ ಸಮಸ್ಯೆಯನ್ನು ಹಲವು ಆಯಾಮಗಳಿಂದ, ವೈಜ್ಞಾನಿಕವಾಗಿ ವಿಶ್ಲೇಷಿಸಬೇಕಿದೆ ಎನ್ನುತ್ತಾರೆ ಖ್ಯಾತ ಛಾಯಾಗ್ರಾಹಕರು ಮತ್ತು ಪರಿಸರವಾದಿಗಳಾದ ಕೃಪಾಕರ್– ಸೇನಾನಿ.

"ಸಂಚಕಾರ ಇರುವುದು ರಾತ್ರಿ ಓಡಾಡುವ ಪ್ರಾಣಿಗಳಿಗೆ ಮಾತ್ರವಲ್ಲ, ಇಷ್ಟೆಲ್ಲ ವಾಹನಗಳು ಎಡೆಬಿಡದೆ ಸಾಗುತ್ತಿದ್ದರೆ ಹಗಲು ಓಡಾಡುವ ಪ್ರಾಣಿಗಳು ಏನು ಮಾಡಬೇಕು? ಹಗಲು ಕೂಡ ಪ್ರಾಣಿಗಳಿಗೆ ರಸ್ತೆ ದಾಟಲಿಕ್ಕಾದ ಸ್ಥಿತಿ ಇದೆ. ಉದಾಹರಣೆಗೆ ಆನೆಗಳು, ಮಳೆಗಾಲದಲ್ಲಂತೂ ಹಗಲಿಡೀ ಓಡಾಡುತ್ತಲೇ ಇರುತ್ತವೆ. ಅವು ಹೇಗೆ ರಸ್ತೆ ದಾಟುವುದು? ಅದನ್ನು ನಾವು ಆಲೋಚಿಸಿದ್ದೇವೆಯೇ? ಅಲ್ಲದೇ ಈ ಅಭಿವೃದ್ಧಿ ಎನ್ನುವುದಕ್ಕೆ ಒಂದು ಕೊನೆ ಅಂತ ಇಲ್ಲ. ಮೊದಲು ನಾಲ್ಕು ಲೈನುಗಳು, ಆರು ಲೈನುಗಳು, ಇನ್ನೊಂದು ಹತ್ತು ವರ್ಷ ಬಿಟ್ಟರೆ ಎಂಟು ಲೈನುಗಳೂ ಸಾಕಾಗಲ್ಲ. ಈ ರಸ್ತೆಯನ್ನು ಬಿಟ್ಟು ಪರ್ಯಾಯ ಮಾರ್ಗ ಏನಿದೆ ಎಂದು ವಾಸ್ತವ ನೆಲೆಗಟ್ಟಿನಲ್ಲಿ ಆಲೋಚಿಸಿದ್ದೇವೆಯೇ? ಪಾರಂಪರಿಕ ಸ್ಮಾರಕಗಳನ್ನು ಸಂರಕ್ಷಿಸಿದ ಹಾಗೆ ಈ ಜೈವಿಕ ವಲಯವನ್ನು ಕೂಡ ಮಾನವ ಹಸ್ತಕ್ಷೇಪದಿಂದ ಮುಕ್ತಗೊಳಿಸಿ, ಸಂರಕ್ಷಿಸಲು ಯಾಕೆ ನಾವು ಆಲೋಚಿಸುವುದಿಲ್ಲ?" ಎಂದು ಕೃಪಾಕರ್ – ಸೇನಾನಿ ಮುಂದಿಡುವ ಪ್ರಶ್ನೆಗೆ ಒಂದು ಸಾಲಿನ ಸರಳ ಉತ್ತರವಿಲ್ಲ. ಈ ಪ್ರಶ್ನೆಗೆ ಅಭಿವೃದ್ಧಿ ಕುರಿತ ನಮ್ಮ ರೂಢಿಗತ ಮನೋಧರ್ಮದ ಆಚೆಗೆ ಉತ್ತರ ಹುಡಕಬೇಕಿದೆ.

ಹುಣಸೂರು–– ಗೋಣಿಕೊಪ್ಪಲು–– ಕುಟ್ಟ ಮಾರ್ಗವಾಗಿ ಸಾಗುವ ಪರ್ಯಾಯ ಮಾರ್ಗ 32 ಕಿ.ಮೀ. ಹೆಚ್ಚುವರಿ ದೂರವಿದೆ, ಹೀಗಾಗಿ ಇಂಧನ ಬಳಕೆ ಅಧಿಕವಾಗುತ್ತದೆ. ಇದು ದೇಶದ ಮೇಲೆ ಅಪಾರವಾದ ಇಂಧನ ಆಮದು ಹೊರೆಯನ್ನು ಉಂಟು ಮಾಡುತ್ತದೆ ಎನ್ನುವುದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಈ ಅಭಿವೃದ್ಧಿ ಪ್ರಸ್ತಾವನೆಗೆ ನೀಡಿರುವ

## ನಮ್ಮ ಸಂಘ

ಕಾಡು ಸೀಳಿಕೊಂಡು ಸಾಗುವ ರಸ್ತೆ ಮಾತ್ರವೇ ಕಾಡು ಹಾಗೂ ವನ್ಯಜೀವಿಗಳಿಗೆ ಕುತ್ತು ಎನ್ನುವಂತಿಲ್ಲ. ಈ ಅಪರೂಪದ ಜೀವಜಾಲವನ್ನು ಹೆಚ್ಚು ಕದಡದೇ, ಅದರ ಪಾಡಿಗೆ ಬಿಟ್ಟು, ಸಂರಕ್ಷಿಸುವುದು ಒಂದು ಸಂಕೀರ್ಣ ಪ್ರಕ್ರಿಯೆ. ಒಂದಕ್ಕೊಂದು ತಳಕು ಹಾಕಿಕೊಂಡ, ಕಣ್ಣಿಗೆ ಎದ್ದು ಕಾಣಿಸದ, ಆದರೆ ವನ್ಯ ಬದುಕಿನ ಮೇಲೆ ಪ್ರತ್ಯಕ್ಷ, ಪರೋಕ್ಷ ಪರಿಣಾಮ ಬೀರುವ ಹಲವಾರು ಸಮಸ್ಯೆಗಳಿರುತ್ತವೆ.

ಬಂಡೀಪುರ ಕಾಡಿಗೆ ಹೊಂದಿಕೊಂಡಿರುವ ಹಾಡಿಗಳು, ಹಳ್ಳಿಗಳ ಜನರು ಉರುವಲು ಸಂಗ್ರಹಿಸಲು ಕಾಡನ್ನೇ ಅವಲಂಬಿಸಿದ್ದರು. ದಿನಗೂಲಿಯಿಂದ ಬದುಕುವ ಎಷ್ಟೋ ಬಡವರಿಗೆ, ಅದರಲ್ಲಿಯೂ ದಲಿತರು, ಆದಿವಾಸಿಗಳಿಗೆ ಒಂದು ಹೊತ್ತಿನ ಆಹಾರ ಗಳಿಸಿಕೊಳ್ಳುವುದೇ ಕಷ್ಟವಾಗಿರುವಾಗ ಅತ್ಯಾಧುನಿಕ ಗ್ಯಾಸ್ ಒಲೆಯಾಗಲೀ, ದುಬಾರಿ ಅಡುಗೆ ಅನಿಲವನ್ನಾಗಲಿ ಕೊಳ್ಳುವ ಶಕ್ತಿ ಎಲ್ಲಿದೆ? ಹೆಚ್ಚಿನವರು ಅನಕ್ಷರಸ್ಥರು, ಅದನ್ನು ಸುರಕ್ಷಿತ ರೀತಿಯಲ್ಲಿ ಬಳಸುವ ತಿಳಿವಳಿಕೆಯ ಕೊರತೆ. ಅಲ್ಲದೇ ಚಿಕ್ಕಪುಟ್ಟ ಹಳ್ಳಿಗಳ ಮೂಲೆಗೆ ಅಡುಗೆ ಅನಿಲ ಸಿಲಿಂಡರ್ ತಲುಪಿಸುವ ಸದೃಢ ವಿತರಣಾ ವ್ಯವಸ್ಥೆಯಾದರೂ ಎಲ್ಲಿದೆ? 15 ವರ್ಷಗಳ ಕೆಳಗೆ ಪ್ರತೀದಿನವೂ ಸುಮಾರು 200 ಹಳ್ಳಿಗಳ ಜನರು ಉರುವಲು ಸಂಗ್ರಹಣೆಗೆ ಬಂಡಿಪುರ ಕಾಡಿಗೆ ಹೋಗುತ್ತಿದ್ದರು. ಸುತ್ತಮುತ್ತಲಿನ 35ರಿಂದ 40 ಸಾವಿರ ಕುಟುಂಬಗಳು ಈ ಉರುವಲನ್ನು ಅವಲಂಬಿಸಿದ್ದವು. ಸರಾಸರಿ ಒಬ್ಬರು ಹತ್ತು ಕೆಜಿ ಉರುವಲು ಎಂದಿಟ್ಟುಕೊಂಡರೂ, ಅಂದಾಜು ಮೂರೂವರೆ ಲಕ್ಷ ಕೆಜಿಯಷ್ಟು ಉರುವಲು ಪ್ರತೀದಿನ ಕಾಡಿನಿಂದ ಸಂಗ್ರಹಣೆಯಾಗುತ್ತಿತ್ತು. ಜೊತೆಗೆ ಇಷ್ಟೆಲ್ಲ ಜನರ ಗದ್ದಲ, ಓಡಾಟದಿಂದ ಕಾಡಿನ ಪ್ರಾಣಿಗಳು, ಪಕ್ಷಿಗಳ ಸಹಜ ಜೀವನದ ಮೇಲೆ ಪರಿಣಾಮವಾಗದೇ ಇರುವುದೇ? ಬಂಡೀಪುರ ಅರಣ್ಯದಲ್ಲಿ ವರ್ಷಗಟ್ಟಲೆ ಕೆಲಸ ಮಾಡುತ್ತ, ಬುಡಕಟ್ಟು ಜನಾಂಗ, ಸುತ್ತಲಿನ ಹಳ್ಳಿಗರೊಂದಿಗೆ ಹತ್ತಿರದಿಂದ ಒಡನಾಡಿದ ಕೃಪಾಕರ ಸೇನಾನಿಯವರು ಈ ಸಮಸ್ಯೆಯನ್ನು ಮನಗಂಡರು. ಬಂಡಿಪುರದ ಸುತ್ತಮುತ್ತಲಿನ ಈ ಎಲ್ಲ ಹಳ್ಳಿಗಳ ಜನರನ್ನು ಸಂಘಟಿಸಿ, 'ನಮ್ಮ ಸಂಘ' ಕಟ್ಟಿದರು. ಅಡುಗೆ ಅನಿಲ ಬಳಸುವ ಕುರಿತು ತಿಳಿವಳಿಕೆ ನೀಡಿದರು. 'ನಮ್ಮ ಸಂಘ"ದ ಮೂಲಕ ಈ ವರೆಗೆ 40,000ಕ್ಕೂ ಹೆಚ್ಚಿನ ಕುಟುಂಬಗಳಿಗೆ ಅಡುಗೆಅನಿಲ ಕೊಳ್ಳಲು ಸಹಾಯವಾಗಿದೆ. ನಮ್ಮ ಸಂಘ ಹೆಸರೇ ಹೇಳುವಂತೆ ನಮ್ಮದು, ಸಮುದಾಯದ್ದು, ಈ ವರೆಗೆ ಯಾವುದೇ ವಿದೇಶೀ ದೇಣಿಗೆಯನ್ನಾಗಲೀ ಅಥವಾ ಸರ್ಕಾರಿ ನೆರವನ್ನಾಗಲೀ ತೆಗೆದುಕೊಳ್ಳದೇ, ಸ್ನೇಹಿತರು ಮತ್ತು ಹಿತೈಷಿಗಳು ನೀಡಿದ ನೆರವನ್ನು ನೆಚ್ಚಿಕೊಂಡಿರುವ ಸಂಘ. ಇಂಡಿಯನ್ ಆಯಿಲ್ ಕಾರ್ಪೊರೇಶನ್ ಕರ್ನಾಟಕ ಘಟಕ ಕೂಡ ಸಿಲಿಂಡರ್ ವಿತರಣೆ ಜಾಲವನ್ನು ವಿಸ್ತರಿಸಲು ಸಹಾಯ ಮಾಡಿದೆ. ಈಗ ಸುತ್ತಲಿನ 200 ಹಳ್ಳಿಗಳ ಜನರು ಉರುವಲಿಗಾಗಿ ಪ್ರತೀದಿನ ಕಾಡಿಗೆ ಕಾಲಿಡುವುದು ಹೆಚ್ಚುಕಡಿಮೆ ನಿಂತೇಹೋಗಿದೆ. ಕಾಡು ಮತ್ತು ಜೀವಜಾಲವನ್ನು ಉಳಿಸುವ ನಿಟ್ಟಿನಲ್ಲಿ ಸುತ್ತಲಿನ ಹಳ್ಳಿಗಳ ಕಾಡಿನ ಅವಲಂಬನೆ ತಪ್ಪಿ, ಸುಸ್ಥಿರವಾಗಿ ಏಳಿಗೆಯಾಗುವುದು ಮಹತ್ವದ ಪಾತ್ರ ವಹಿಸುತ್ತದೆ ಎನ್ನುವುದಕ್ಕೆ ನಮ್ಮ ಸಂಘ ಉತ್ತಮ ಉದಾಹರಣೆ. ಇದಕ್ಕೆ ಒಂದು ಸಾಕ್ಷಿ ಎಂದರೆ ಬಂಡೀಪುರದ ಉಪಗ್ರಹ ಚಿತ್ರಗಳನ್ನು ನೋಡಿದರೆ ಇತ್ತೀಚಿನ ವರ್ಷಗಳಲ್ಲಿ ಹಸಿರು ದಟ್ಟಣೆ ಹೆಚ್ಚಾಗಿರುವುದನ್ನು ತೋರಿಸುತ್ತದೆ. ಇನ್ನುಳಿದ ಅಕ್ಕಪಕ್ಕದ ಅಭಯಾರಣ್ಯಗಳಲ್ಲಿ ಹಸಿರು ದಟ್ಟಣೆ ಅಷ್ಟೇ ಇದೆ, ಅಥವಾ ಸ್ವಲ್ಪ ವಿರಳವಾಗಿದೆ.

ಚಿತ್ರ: ಎಚ್.ಸತೀಶ್

